ಕರ್ನಾಟಕ ವಿಧಾನ ಸಭೆ, ಸಂಶೋಧನಾ ಮತ್ತು ಉಲ್ಲೇಖ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ

ದಿನಾಂಕ : DATE : 25/08/2019

# ಅರುಣಾಸ್ತಮಾನ

ವಿ. ವಾ. 25-8-19

## ಸುಷ್ಮಾ ನಿಧನ ಬೆನ್ನಲ್ಲೇ ಬಿಜೆಪಿಗೆ ಮತ್ತೊಂದು ಆಘಾತ

**ನವದೆಹಲಿ:** ಬಿಜೆಪಿಯ ಆಪತ್ಬಾಂಧವ, ಪ್ರಧಾನಿ ನರೇಂದ್ರ ಮೋದಿ ಪಾಲಿನ ಚಾಣಕ್ಯ, ಖ್ಯಾತ ಸಂಸದೀಯ ಪಟು, ಜಿಎಸ್‌ಟಿ ಸೂತ್ರಧಾರಿಯೂ ಆದ ಮಾಜಿ ಕೇಂದ್ರ ಸಚಿವ ಅರುಣ್ ಜೇಟ್ಲಿ(66) ಇನ್ನು ನೆನಪು ಮಾತ್ರ. ಉಸಿರಾಟ ಹಾಗೂ ಹೃದಯಸಂಬಂಧಿ ಕಾಯಿಲೆಗಳಿಗಾಗಿ ಆ.9ರಿಂದ ದೆಹಲಿಯ ಅಖಿಲ ಭಾರತ ವೈದ್ಯವಿಜ್ಞಾನ ಸಂಸ್ಥೆ(ಏಮ್ಸ್)ಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಶನಿವಾರ ಮಧ್ಯಾಹ್ನ 12.07ಕ್ಕೆ ಕೊನೆಯುಸಿರೆಳೆದರು. ಇದರಿಂದಾಗಿ ಕಳೆದ 10 ತಿಂಗಳ ಅವಧಿಯಲ್ಲಿ ಬಿಜೆಪಿ ಅನಂತಕುಮಾರ್, ಮನೋಹರ ಪರಿಕ್ಕರ್, ಸುಷ್ಮಾ ಸ್ವರಾಜ್ ಬಳಿಕ ನಾಲ್ಕನೆಯವರಾಗಿ ಅರುಣ್ ಜೇಟ್ಲಿ ಅವರನ್ನು ಕಳೆದುಕೊಂಡಂತಾಗಿದೆ.

ದೆಹಲಿಯ ಕೈಲಾಶ್ ಕಾಲನಿಯಲ್ಲಿರುವ ಜೇಟ್ಲಿ ನಿವಾಸದಲ್ಲಿ ಭಾನುವಾರ ಬೆಳಗ್ಗೆ 10 ಗಂಟೆವರೆಗೆ ಹಾಗೂ ಮಧ್ಯಾಹ್ನ 11 ರಿಂದ 2 ಗಂಟೆವರೆಗೆ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಜೇಟ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಸಂಜೆ 4 ಗಂಟೆಗೆ ದೆಹಲಿಯ ನಿಗಂಬೋಧ್ ಘಾಟ್‌ನಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಜೇಟ್ಲಿ ನಿಧನಕ್ಕೆ ರಾಷ್ಟ್ರಪತಿ ರಾಮನಾಥ ಕೋವಿಂದ, ಉಪರಾಷ್ಟ್ರಪತಿ ವೆಂಕಯ್ಯನಾಯ್ಡು, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಷಾ ಸೇರಿದಂತೆ ಬಿಜೆಪಿ ಹಾಗೂ ವಿಪಕ್ಷಗಳ ಅನೇಕ ನಾಯಕರು ಕಂಬನಿ ಮಿಡಿದಿದ್ದಾರೆ.

**ಮೋದಿಗೆ ಮನವಿ:** ಸದ್ಯ ಮೂರು ದೇಶಗಳ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಜೇಟ್ಲಿ ಪತ್ನಿ ಸಂಗೀತಾ ಹಾಗೂ ಪುತ್ರ ರೋಹನ್ ಜತೆ ದೂರವಾಣಿಯಲ್ಲಿ ಮಾತನಾಡಿ ಸಾಂತ್ವನ ಹೇಳಿದ್ದಾರೆ. ಜಿ7 ಶೃಂಗದ ನಿಮಿತ್ತ ಪ್ರವಾಸದಲ್ಲಿರುವ ಮೋದಿ ಜೇಟ್ಲಿ ನಿಧನ ಹಿನ್ನೆಲೆಯಲ್ಲಿ ಭಾರತಕ್ಕೆ ಹಿಂದಿರುಗಲಿದ್ದಾರೆಂಬ ಮಾತುಗಳು ಕೇಳಿಬಂದಿದ್ದವು. ಆದರೆ ಪ್ರವಾಸ ಮೊಟಕುಗೊಳ್ಳುವುದು ಬೇಡ. ದೇಶ ಮೊದಲು ಎಂದು ಜೇಟ್ಲಿ ಪತ್ನಿ ಹಾಗೂ ಪುತ್ರ ಪ್ರಧಾನಿಗೆ ಮನವಿ ಮಾಡಿದ್ದಾರೆನ್ನಲಾಗಿದೆ. ಆದರೆ ಮೋದಿ ಪ್ರವಾಸ ಮೊಟಕು ಕುರಿತು ಯಾವುದೇ ಅಧಿಕೃತ ಮಾಹಿತಿ ಹೊರಬಿದ್ದಿಲ್ಲ. » ವಿವರ **ಪುಟ 8,9**



## 1952-2019

### 16 ದಿನ

ಉಸಿರಾಟದಲ್ಲಿ ತೊಂದರೆ ಕಾಣಿಸಿದ್ದರಿಂದಾಗಿ ಜೇಟ್ಲಿ ಅವರನ್ನು ಆ.9ರಂದು ಬೆಳಗ್ಗೆ 10 ಗಂಟೆಗೆ ಏಮ್ಸ್‌ಗೆ ದಾಖಲಿಸಲಾಗಿತ್ತು. ಬಳಿಕ ಸತತ 16 ದಿನ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗಿತ್ತು. ಈ ವೇಳೆ ಅನೇಕ ಗಣ್ಯರು ಏಮ್ಸ್‌ಗೆ ಭೇಟಿ ನೀಡಿದ್ದರು. ಆ.15ರಂದು ಆರೋಗ್ಯ ಮತ್ತಷ್ಟು ಬಿಗಡಾಯಿಸಿದ್ದರಿಂದ ಅವರನ್ನು ಐಸಿಯುನಿಂದ ಇಸಿಎಂಒಗೆ (ಎಕ್ಸ್‌ಟ್ರಾ ಕಾರ್ಪೊರಿಯಲ್ ಮೆಂಬರೇನ್ ಆಕ್ಸಿಜೆನೇಷನ್) ಸ್ಥಳಾಂತರಿಸಿ ಚಿಕಿತ್ಸೆ ನೀಡಲಾಗುತ್ತಿತ್ತು.

ಅರುಣ್ ಜೇಟ್ಲಿ ಉತ್ತಮ ರಾಜಕೀಯ ನಾಯಕ ಮತ್ತು ಕಾನೂನು ತಜ್ಞ, ಅವರು ಭಾರತಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಒಬ್ಬ ಒಳ್ಳೆಯ ಸ್ನೇಹಿತನನ್ನು ಕಳೆದುಕೊಂಡಿದ್ದೇನೆ

[illegible]

### ಸಂಕೇಶ್ವರರ ಕಂಬನಿ

ಅರುಣ್ ಜೇಟ್ಲಿ ನಿಧನಕ್ಕೆ ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್ ಡಾ. ವಿಜಯ ಸಂಕೇಶ್ವರ ಹಾಗೂ ವ್ಯವಸ್ಥಾಪಕ ನಿರ್ದೇಶಕ ಆನಂದ ಸಂಕೇಶ್ವರ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. 'ನನ್ನ ಒಬ್ಬ ಒಳ್ಳೆಯ ಮಿತ್ರ ಹಾಗೂ ಹಿತಚಿಂತಕನನ್ನು ಕಳೆದುಕೊಂಡಿದ್ದು ಅತೀವ ದುಃಖ ತಂದಿದೆ. ಅವರ ನಿಧನ ದೇಶಕ್ಕಾದ ದೊಡ್ಡ ನಷ್ಟ. ಸಂಸತ್ತಿನಲ್ಲಿ ಅವರು ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದ ರೀತಿ ನನ್ನ ಮೇಲೆ ಪ್ರಭಾವ ಬೀರಿತ್ತು. ಹಣಕಾಸು, ಕಾನೂನು ಇತ್ಯಾದಿ ಖಾತೆಗಳನ್ನು ಸಮರ್ಥವಾಗಿ ನಿಭಾಯಿಸಿದ್ದರು. ದೇಶದ ಅಭಿವೃದ್ಧಿ ಬಗ್ಗೆ ಸದಾ ಚಿಂತಿಸುತ್ತಿದ್ದರು' ಎಂದು ಡಾ. ಸಂಕೇಶ್ವರ ಸ್ಮರಿಸಿದ್ದಾರೆ. ಹಣಕಾಸು ಸಚಿವರಾಗಿ ಅವರು ಜಾರಿಗೆ ತಂದ ಜಿಎಸ್‌ಟಿ ಕಾಯ್ದೆ ಒಂದು ಕ್ರಾಂತಿಕಾರಿ ನಿರ್ಣಯ. ಅದನ್ನು ಸುಸೂತ್ರವಾಗಿ ಜಾರಿಗೊಳಿಸಿದ್ದು ಅವರ ಹೆಗ್ಗಳಿಕೆ.

### ಬಹ್ರೇನ್‌ನಲ್ಲಿ ಮೋದಿ ಭಾವುಕ

...ಪುಟ-8...

### ಅರುಣ್ ಜೇಟ್ಲಿ ಹೆಗ್ಗುರುತು

- ಮೋದಿಯನ್ನು ಪ್ರಧಾನಮಂತ್ರಿ ಅಭ್ಯರ್ಥಿಯಾಗಿ ಘೋಷಣೆ ಮಾಡಿದ ಹಿಂದಿನ ಪ್ರೇರಕಶಕ್ತಿ ಜೇಟ್ಲಿ
- ಜಿಎಸ್‌ಟಿ ಸೇರಿ ಮೋದಿ ಕೈಗೊಂಡ ಹಲವಾರು ಆರ್ಥಿಕ ಸುಧಾರಣೆ ಕ್ರಮಗಳ ಹಿಂದಿದ್ದುದು ಜೇಟ್ಲಿ
- ಪ್ರಮೋದ್ ಮಹಾಜನ್ ಬಳಿಕ ಎಲ್ಲ ಪಕ್ಷಗಳ ಜತೆ ಉತ್ತಮ ಸಂಬಂಧ ಬೆಳೆಸಿದ್ದ ನಾಯಕ
- ನೋಟ್ ಬ್ಯಾನ್, ಜನಧನ್, ಬೇನಾಮಿ ಆಸ್ತಿ ಕಾಯ್ದೆ ಹಿಂದೆಯೂ ಜೇಟ್ಲಿ ನೆರಳಿತ್ತು
- ದೆಹಲಿ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾಗಿದ್ದ ಜೇಟ್ಲಿ ಟೆನಿಸ್ ಅನ್ನೂ ಪ್ರೀತಿಸುತ್ತಿದ್ದರು. ಪ್ರತಿ ವರ್ಷ ಜೂನ್‌ನಲ್ಲಿ ವಿಂಬಲ್ಡನ್ ಟೂರ್ನಿಗೆ ಹಾಜರಾಗುತ್ತಿದ್ದರು
- ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾಗಿದ್ದಾಗ ತಮ್ಮ ಚರ್ಚೆಗೆ ಪೂರಕವಾಗಿ ಸಾಕ್ಷ್ಯಾಧಾರ ಸಿದ್ಧಪಡಿಸಲು 35 ಸಾವಿರ ರೂ. ನೀಡಿ ಪುಸ್ತಕಗಳನ್ನು ಖರೀದಿಸಿ ತಂದಿದ್ದರು

### ಭಾರತದ ಆರ್ಥಿಕತೆಗೆ ವೈದ್ಯ

ಭಾರತದಲ್ಲಿ ಸಂಚಲನ ಮೂಡಿಸಿರುವ ಜಿಎಸ್‌ಟಿ ಅನುಷ್ಠಾನದಲ್ಲಿ ಜೇಟ್ಲಿ ಪಾತ್ರ ನಿರ್ಣಾಯಕ. ವ್ಯಾಪಾರಸ್ಥರ ವಿರೋಧ ವ್ಯಕ್ತವಾದಾಗ ಪರಿಸ್ಥಿತಿ, ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಿದ್ದು ಜೇಟ್ಲಿ ಹೆಗ್ಗಳಿಕೆ. ಇದಲ್ಲದೆ ದಿವಾಳಿತನ ಮತ್ತು ದಿವಾಳಿತನ ಸಂಹಿತೆ, ಹಣಕಾಸು ನೀತಿ ಸಮಿತಿ ರಚನೆ, ಬ್ಯಾಂಕ್‌ಗಳ ವಿಲೀನ, ವಿದೇಶಿ ನೇರ ಹೂಡಿಕೆ ನಿಯಮ ಸಡಿಲದಂತಹ ಹಲವು ಕ್ರಮಗಳ ಹಿಂದೆ ಜೇಟ್ಲಿಯ ನೆರಳಿದೆ.